841 (913) ಶ್ರೀ ಬಾಲರಾಜ್ ಎಸ್ (ಕೊಳ್ಳೆಗಾಲ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಕ್ಫ್ಸವತಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ?

ಆ) ಅಲ್ಪಸಂಖ್ಯಾತರ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ?

ಇ) ಪೂರಕವಾಗುವಂತೆ ಯಾವುದಾದರೂ ಹೊಸ ಯೋಜನೆಗಳನ್ನು ಜಾರಿಗೆ ತರುವ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಈ) ಕೊಳ್ಳೆಗಾಲ ಮತ್ತು ಯಳಂದೂರು ತಾಲ್ಲೂಕಿಗೆ ಹಣ ಬಿಡುಗಡೆ ಮಾಡಲಾಗಿದೆಯೇ ?

ಉ) ಬಿಡುಗಡೆ ಆಗಿದ್ದರೆ ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು) –

ಅ) ಕರ್ನಾಟಕ ರಾಜ್ಯ ವಕ್ಫ್ಸಮಂಡಳಿ ವತಿಯಿಂದ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ವಕ್ಫ್ಸ ಆಸ್ತಿಗಳ ರಕ್ಷಣೆ ಮತ್ತು ದರುಸ್ತಿಗಾಗಿರುತ್ತದೆ ಈ ಕಾರ್ಯಕ್ರಮಗಳು ಈ ಕೆಳಕಂಡಂತಿದೆ

1) ವಕ್ಫ್ಸ ಸಂಸ್ಥೆಗಳ ದುರಸ್ತಿಗಾಗಿ ಅನುದಾನ ಈ ಕಾರ್ಯಕ್ರಮದಲ್ಲಿ 2 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ವಕ್ಫ್ಸ ಸಂಸ್ಥೆಗಳನ್ನು ದುರಸ್ತಿ ಹಾಗೂ ನವೀಕರಣ ಮಾಡುವ ಸಲುವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ

2) ವಕ್ಫ್ಸ ಆಸ್ತಿಗಳ ಸರ್ವೆ ಕಾರ್ಯ ವಕ್ಫ್ಸ ಕಾಯಿದೆಯ ಪ್ರಕಾರ ಪ್ರತಿ 20 ವರ್ಷಕ್ಕೊಮ್ಮೆ ಸರ್ವೆ ಇಲಾಖೆಯಿಂದ ವಕ್ಫ್ಸ ಆಸ್ತಿಗಳ ಸರ್ವೆ ಕಾರ್ಯ ಕೈಗೊಳ್ಳಲು ಅನುದಾನವನ್ನು ನೀಡಲಾಗುತ್ತಿದೆ

3) ಕರ್ನಾಟಕ ವಕ್ಫ್ಸ ಮಂಡಳಿಯ ಜೀರ್ಣೋಪ ಯೋಗಕ್ಕಾಗಿ ಅನುದಾನ ಕರ್ನಾಟಕ ರಾಜ್ಯ ವಕ್ಫ್ಸ ಹಾಗೂ ಇದರ ಜಿಲ್ಲಾ ಕಚೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರನ್ನು ಹಾಗೂ ಅಧಿಕಾರಿಗಳ ವೇತನ ಭತ್ಯೆಗಳು ಹಾಗೂ ಇತರೇ ಸಾದಿಲ್ವಾರು ಖರ್ಚುಗಳಿಗಾಗಿ ಅನುದಾನವನ್ನು ಸರ್ಕಾರದಿಂದ ನೀಡಲಾಗುತ್ತಿದೆ

ಆ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವತಿಯಿಂದ ಕೈಗೊಳ್ಳಲಾಗುತ್ತಿರುವ ಕಾರ್ಯಕ್ರಮಗಳು ಕೇವಲ ವಕ್ಫ್ ಸಂಸ್ಥೆಯ ಆಸ್ತಿಗಳ ರಕ್ಷಣೆ ಮತ್ತು ದುರಸ್ತಿಗಾಗಿ ಇರುತ್ತದೆ

ಈ ಯೋಜನೆಗಳು ಕೇವಲ ವಕ್ಫ್ ಸಂಸ್ಥೆಗಳಿಗೆ ಮಾತ್ರ ಒಳಪಟ್ಟಿದ್ದು ಇದರಲ್ಲಿ ವೈಯಕ್ತಿಕ ಫಲಾನುಭವಿಗಳು ಇರುವುದಿಲ್ಲ

ಇ) ವಕ್ಫ್ ಮಂಡಳಿಗೆ ಸಂಬಂಧಿಸಿದಂತೆ ಯಾವುದೇ ಹೊಸ ಯೋಜನೆಗಳನ್ನು ರೂಪಿಸಲಾಗಿರುವುದಿಲ್ಲ

ಈ) ಕೊಳ್ಳೆಗಾಲ ತಾಲ್ಲೂಕಿನ ವಕ್ಫ್ ಸಂಸ್ಥೆಗಳಿಗೆ 2005–06 ರಲ್ಲಿ ಸರ್ಕಾರವು ರೂ 80000 ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಯಳಂದೂರು ತಾಲ್ಲೂಕಿನ ಒಂದು ವಕ್ಫ್ ಸಂಸ್ಥೆಗೆ ರೂ 20000 ಅನುದಾನವನ್ನು ಬಿಡುಗಡೆ ಮಾಡಲಾಗಿದೆ

2006–07 ರಲ್ಲಿ ಕೊಳ್ಳೆಗಾಲ ಮತ್ತು ಯಳಂದೂರು ವಕ್ಫ್ ಸಂಸ್ಥೆಗಳಿಗೆ ರೂ 9,60,000 ಗಳ ಅನುದಾನವನ್ನು ಮಾಡಲಾಗಿದೆ

ಉ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು	2005–06 ಬಿಡುಗಡೆ ಮಾಡಿದ ಮೊತ್ತ ರೂ ಗಳು	ಒಟ್ಟು ವಕ್ಫ್ ಸಂಸ್ಥೆಗಳು	ಯಾವ ಕೆಲಸಕ್ಕೆ ಹಣ ಬಿಡುಗಡೆ ಮಾಡಲಾಗಿದೆ
1	ಕೊಳ್ಳೆಗಾಲ	40,000	2	ಮಸೀದಿಯ ಕಟ್ಟಡ ನಿರ್ಮಾಣಕ್ಕೆ
2	ಕೊಳ್ಳೆಗಾಲ	40,000	2	ಮುಸ್ಲಿಮರ ಸ್ಮಶಾನದ ಗೋಡೆಯ ನಿರ್ಮಾಣಕ್ಕಾಗಿ
3	ಯಳಂದೂರು	20,000	1	ಮಸೀದಿಯ ಕಟ್ಟಡ ನಿರ್ಮಾಣಕ್ಕಾಗಿ
	ಒಟ್ಟು	1,00,000	5 ವಕ್ಫ್ ಸಂಸ್ಥೆ	
1	ಕೊಳ್ಳೆಗಾಲ	2006–07 5,50,000 3,00,000 1,00,000 9,50,000	 5 2 1 8	ಮಸೀದಿಯ ಕಟ್ಟಡ ನಿರ್ಮಾಣಕ್ಕೆ ಮುಸ್ಲಿಮರ ಸ್ಮಶಾನದ ಗೋಡೆ ನಿರ್ಮಾಣಕ್ಕೆ ಅರಬ್ಬಿಕ್ ಮದ್ರೆಸಾ ನಿರ್ಮಾಣಕ್ಕೆ